

ಅರುಣ ಪಿ. ಭಟ್ಟ

# ವಾರಭವಿಷ್ಯ: 04.12.2025ರಿಂದ 10.12.2025ರವರೆಗೆ



### ಮೇಷ

ನಿಮ್ಮ ವರ್ಚಸ್ಸು ವೃದ್ಧಿ ಆಗಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ. ಶತ್ರುಗಳ ಉಪಟಳ ಹೆಚ್ಚಾಗಲಿದೆ. ಇದರಿಂದ ಮಾನಸಿಕ ಆತಂಕಕ್ಕೆ ಗುರಿಯಾಗುತ್ತೀರಿ. ಆಸ್ತಿ ಖರೀದಿಗೆ ಅವಕಾಶಗಳು ಸೃಷ್ಟಿಯಾಗಲಿವೆ. ಕೌಟುಂಬಿಕ ಕಲಹ ಏರ್ಪಡಬಹುದು. ಅನಗತ್ಯ ವಾಗ್ವಾದ ಮಾಡಿಕೊಳ್ಳಬೇಡಿ. ವೈಯಕ್ತಿಕ ಸಂಬಂಧದಲ್ಲಿ ಬೇಸರ ಉಂಟಾಗುತ್ತದೆ. ಶುಭದಿನ: **06.** ಶ್ರೀರಾಜರಾಜೇಶ್ವರಿ ಜಪ ಮಾಡಿರಿ.



### ವೃಷಭ

ಉದ್ಯೋಗ ಸ್ಥಳದಲ್ಲಿ ಏಳ್ಗೆ ಇದೆ. ನಿಮ್ಮ ಆರೋಗ್ಯ ಉತ್ತಮವಾಗಿ ಇರಲಿದೆ. ಮನೆಯಲ್ಲಿ ಸಂತೋಷದ ವಾತಾವರಣ ಇರುತ್ತದೆ. ವಾರದ ಮಧ್ಯಭಾಗದಲ್ಲಿ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಿನ ಅನುಕೂಲ ಒದಗಿಬರಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರಮಕ್ಕೆ ತಕ್ಕ ಫಲ ದೊರೆಯಲಿದೆ. ಮಕ್ಕಳ ಏಳ್ಗೆಯಿಂದ ಹೆಮ್ಮೆ ಮೂಡುತ್ತದೆ. ವೈವಾಹಿಕ ಜೀವನ ಸಂತೃಪ್ತಿಯಿಂದ ಇರುತ್ತದೆ. ಶುಭದಿನ: **10.** ಶ್ರೀರಾಮರಕ್ಷಾಸ್ತೋತ್ರ ಪಠಿಸಿರಿ.



### ಮಿಥುನ

ಮನೆಯಲ್ಲಿ ದೇವತಾ ಆರಾಧನೆ ನಡೆಸುವ ಸಾಧ್ಯತೆ ಇದೆ. ಸಾಮಾಜಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ ಪಾಲ್ಗೊಳ್ಳಲಿದ್ದೀರಿ. ಅಗತ್ಯ ಇರುವವರಿಗೆ ನೆರವು ನೀಡಲಿದ್ದೀರಿ. ಆದಾಯ ಹೆಚ್ಚುವ ಸಾಧ್ಯತೆ ಇದೆ. ವೃತ್ತಿನಿರತರು ಹೆಚ್ಚು ಚಟುವಟಿಕೆಗಳಲ್ಲಿ ತೊಡಗುವ ಸಾಧ್ಯತೆ ಇದೆ. ಪ್ರಗತಿಯ ಹಾದಿಯಲ್ಲಿ ಸಾಗಲಿದ್ದೀರಿ. ಆರೋಗ್ಯ ಚೆನ್ನಾಗಿರುತ್ತದೆ. ಶುಭದಿನ: **07.** ಸೌಂದರ್ಯ ಲಹರಿ ಪಠಿಸಿರಿ.



### ಕಟಕ

ಹಣ ಹೂಡಿಕೆಯಲ್ಲಿ ಉತ್ತಮ ಪ್ರಗತಿ. ಈ ಅವಧಿಯಲ್ಲಿ ಹೆಚ್ಚು ಹಣ ಖರ್ಚಾಗುತ್ತದೆ. ಉದ್ಯೋಗ ಸ್ಥಳದಲ್ಲಿ ಅಂದುಕೊಂಡ ಸ್ಥಾನಮಾನ ಪಡೆಯಲು ವಾರದ ಮಧ್ಯಭಾಗದಲ್ಲಿ ಅವಕಾಶ ದೊರೆಯುತ್ತದೆ. ಕಾನೂನು ವಿಚಾರಕ್ಕೆ ಸಂಬಂಧಿಸಿದ ಜವಾಬ್ದಾರಿಗಳನ್ನು ಪೂರೈಸಲು ಗಮನ ನೀಡಬೇಕಾಗುತ್ತದೆ. ದಾನ ಧರ್ಮ ಕಾರ್ಯಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ಶುಭದಿನ: **09.** ಲಿಂಗಾಷ್ಟಕ ಪಠಿಸಿರಿ



### ಸಿಂಹ

ದಾಂಪತ್ಯ ಜೀವನ ಸಂತೋಷವಾಗಿ ಇರುತ್ತದೆ. ಸಂಬಂಧದಲ್ಲಿ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ವ್ಯಾಪಾರಿಗಳು ಉದ್ಯಮಿಗಳು ಬಹುಕಾಲದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದ್ದೀರಿ. ಪ್ರವಾಸಕ್ಕೆ ತೆರಳುವ ಸಾಧ್ಯತೆ ಇದೆ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚಾಗಲಿದೆ. ಇದೇ ವೇಳೆ ಲಾಭದ ಪ್ರಮಾಣದಲ್ಲಿ ಹೆಚ್ಚಲಿದೆ. ಶುಭದಿನ: **10.** ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



### ಕನ್ಯಾ

ವಾರದ ಶುರುವಿನಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಬಹಳ ಶ್ರಮ ಪಡುತ್ತೀರಿ. ನಿಮ್ಮ ಆತ್ಮವಿಶ್ವಾಸದಲ್ಲಿ ಯಾವುದೇ ಕುಂದುಂಟಾಗುವುದಿಲ್ಲ. ಪರಿಚಯಸ್ಥರ ಆಹ್ವಾನದ ಮೇರೆಗೆ ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದೀರಿ. ಅಗತ್ಯ ವಸ್ತುಗಳ ಖರೀದಿಗೆ ಹೆಚ್ಚಿನ ಹಣ ವ್ಯಯ ಮಾಡಲಿದ್ದೀರಿ. ವಿರೋಧಿ ಪಾಳಯದವರು ನೆಮ್ಮದಿ ಹಾಳು ಮಾಡಬಹುದು. ಶುಭದಿನ: **05.** ವಿಷ್ಣು ಸಹಸ್ರನಾಮ ಪಠಿಸಿರಿ.




### ತುಲಾ

ಆದಾಯ ಮೂಲದಿಂದ ಹಣಕಾಸಿನ ಹರಿವು ಹೆಚ್ಚಾಗಲಿದೆ. ಸಾಮಾಜಿಕ ಸ್ಥಾನಮಾನ ಕೂಡ ಹೆಚ್ಚಲಿದೆ. ವೈವಾಹಿಕ ಜೀವನದಲ್ಲಿ ಸಂತೋಷ ಇರುತ್ತದೆ. ಹಣ ಹೂಡಿಕೆ ಲಾಭದಾಯಕವಾಗಿ ಪರಿಣಮಿಸಲಿದೆ. ನಿರ್ದಿಷ್ಟ ಕೆಲಸಗಳನ್ನು ಪೂರೈಸುವ ಸಲುವಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೌಟುಂಬಿಕ ವಿಷಯಗಳಲ್ಲಿ ಪ್ರಗತಿ ಇದೆ. ಶುಭದಿನ: **08.** ಶ್ರೀಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.



### ವೃಶ್ಚಿಕ

ವಾರದ ಆರಂಭದಲ್ಲಿ ನಿಮ್ಮ ಮೇಲೆ ಒತ್ತಡ ಬರಲಿದೆ. ನಿಮ್ಮ ಪಾಲಿನ ಕೆಲಸಗಳನ್ನು ವೇಗವಾಗಿ ಪೂರ್ಣಗೊಳಿಸುವಿರಿ. ಜೀವನದಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಸಂಗಾತಿಗೆ ಉಡುಗೊರೆ ನೀಡುವ ಬಗ್ಗೆ ಆಲೋಚನೆ ಮಾಡುತ್ತೀರಿ. ನಿಮ್ಮ ಕೈಯಿಂದ ಹಣ ಖರ್ಚಾದರೂ ಶ್ರಮಪಟ್ಟು ಬಾಕಿ ಹಣವನ್ನು ಪಡೆದುಕೊಳ್ಳಲಿದ್ದೀರಿ. ಶುಭದಿನ: **09.** ಹನುಮಾನ್ ಚಾಲಿಸ್ ಪಠಿಸಿರಿ.



### ಧನಸ್ಸು

ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಳ್ಳುವ ಕಡೆಗೆ ಪ್ರಯತ್ನಿಸಿ. ನಿಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ಪೂರ್ಣಗೊಳಿಸಲು ಯಶಸ್ವಿಯಾಗುತ್ತೀರಿ. ಉದ್ಯೋಗ ವ್ಯಾಪಾರ ವಿಚಾರಗಳು ಪ್ರಾಶಸ್ತ್ಯ ಪಡೆಯುತ್ತವೆ. ದಾನ ಧರ್ಮಗಳಲ್ಲಿ ನಾನಾ ಬಗೆಯಲ್ಲಿ ಅಡೆತಡೆ ಉಂಟಾಗುತ್ತದೆ. ವಾರದ ಅಂತ್ಯಕ್ಕೆ ಉನ್ನತ ಶಿಕ್ಷಣದಲ್ಲಿ ಪ್ರಗತಿ ಇದೆ. ಉದ್ಯೋಗ ವಿಚಾರದಲ್ಲಿ ಚಿಂತೆ ಇದೆ. ಶುಭದಿನ: **07.** ಆದಿತ್ಯ ಹೃದಯ ಪಠಿಸಿರಿ.



### ಮಕರ

ಹಿಂದೆಂದಿಗಿಂತ ಹೆಚ್ಚು ಸ್ಪರ್ಧಾತ್ಮಕವಾಗಿ ಇರುತ್ತೀರಿ. ಸಂವಹನದ ಕೊರತೆ ಎದ್ದು ಕಾಣಲಿದೆ. ಉದ್ಯಮಿಗಳಿಗೆ ಹಲವು ಬಗೆಯಲ್ಲಿ ಸವಾಲುಗಳು ಎದುರಾಗಲಿವೆ. ಹೆಚ್ಚು ಹಣ ಖರ್ಚು ಮಾಡಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳಲಿದೆ. ಆರೋಗ್ಯ ಕೂಡ ಸುಧಾರಿಸುತ್ತದೆ. ಅನುಭವಿಗಳ ನೆರವನ್ನು ಪಡೆಯಿರಿ. ಶುಭದಿನ: **10.** ಕಾಲಭೈರವನ ಆರಾಧನೆ ಮಾಡಿರಿ.



### ಕುಂಭ

ನಿಮ್ಮ ಜವಾಬ್ದಾರಿಯನ್ನು ಪೂರೈಸುವುದಕ್ಕೆ ಹೆಚ್ಚು ಸಮಯವನ್ನು ಮೀಸಲಿಡಬೇಕಾಗುತ್ತದೆ. ನಿಮ್ಮ ನಡವಳಿಕೆಯಿಂದ ಸಹೋದ್ಯೋಗಿಗಳು ಹೆಮ್ಮೆ ಪಡುತ್ತಾರೆ. ಜವಾಬ್ದಾರಿಗಳು ಕೂಡ ಜಾಸ್ತಿ ಆಗಲಿವೆ. ಶ್ರಮಕ್ಕೆ ತಕ್ಕ ಫಲಿತ ದೊರೆಯುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರಯಾಣ ಮಾಡಲಿದ್ದೀರಿ. ಗೃಹಾಲಂಕಾರಕ್ಕಾಗಿ ಹೆಚ್ಚಿನ ಸಮಯವನ್ನು ಮೀಸಲಿಡುತ್ತೀರಿ. ಶುಭದಿನ: **08.** ಗಣಪತಿಗೆ ದೂರ್ವಾರ್ಚನೆ ಮಾಡಿರಿ.



### ಮೀನ

ದೂರದ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾಗುತ್ತದೆ. ಹಣ ಹೂಡಿಕೆಯಲ್ಲಿ ಲಾಭವಾಗುವ ಸಾಧ್ಯತೆ ಇದೆ. ನಿಮ್ಮ ಗಮನ ಪೂರ್ತಿಯಾಗಿ ಮನೆ ಬಗ್ಗೆ ತಿರುಗುತ್ತದೆ. ಉದ್ಯೋಗ ಮಾಡುವ ಸ್ಥಳದಲ್ಲಿ ತೆಗೆದುಕೊಂಡ ನಿರ್ಧಾರವೊಂದು ಲಾಭದಾಯಕ ಆಗಲಿದೆ. ಅದರಿಂದಾಗಿ ಮೆಚ್ಚುಗೆ ವ್ಯಕ್ತವಾಗಲಿದೆ. ಆರೋಗ್ಯದ ಬಗ್ಗೆ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಶುಭದಿನ: **09.** ದತ್ತಗುರು ಚರಿತ್ರೆ ಪಠಿಸಿರಿ.